ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 683

ಸದಸ್ಯರ ಹೆಸರು : ಶ್ರೀ ವಿಜಯ್ ಸಿಂಗ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 17.12.2021.

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಬೀದರ್ ಜಿಲ್ಲೆ, ಹುಲಸೂರು ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಬಸ್ ನಿಲ್ದಾಣ ಇಲ್ಲದೆ, ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನಿಯಮಾವಳಿಯಂತೆ ತಾಲ್ಲೂಕು, ಹೋಬಳಿ ಗ್ರಾಮಗಳಲ್ಲಿ 50 ಟ್ರಿಪ್‌ಗಳಿಗಿಂತಲೂ ಹೆಚ್ಚಿನ ಬಸ್ ಸಂಚಾರ ಇದ್ದಲ್ಲಿ, ನಿವೇಶನ ಲಭ್ಯವಿದ್ದಲ್ಲಿ ಆದ್ಯತೆ ಹಾಗೂ ಅನುದಾನದ ಲಭ್ಯತೆ ಅನುಸಾರ ಬಸ್ ನಿಲ್ದಾಣ ನಿರ್ಮಿಸಲು ಅವಕಾಶವಿರುತ್ತದೆ. ಪ್ರಸ್ತುತ ಹುಲಸೂರು ತಾಲೂಕಿನ ಯಾವುದೇ ಹೋಬಳಿಗಳಲ್ಲಿ ನಿಗಮದ ವಶದಲ್ಲಿ ನಿವೇಶನ ಲಭ್ಯವಿರುವುದಿಲ್ಲ. ಗ್ರಾಮಗಳಲ್ಲಿ ಬಸ್ ನಿಲ್ದಾಣವನ್ನು ಗ್ರಾಮಪಂಚಾಯತಿಗಳ ವತಿಯಿಂದ ನಿರ್ಮಿಸಬೇಕಾಗಿರುತ್ತದೆ. ಹುಲಸೂರ ತಾಲ್ಲೂಕಿನ ಈ ಕೆಳಕಂಡ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬಸ್ ನಿಲ್ದಾಣ ಸೌಲಭ್ಯವಿರುವುದಿಲ್ಲ. 1. ಹುಲಸೂರ ಗ್ರಾಮ ಪಂಚಾಯಿತಿ ಸೋಲದಾಬಕಾ, ಗೊವರ್ಧನ ತಾಂಡಾ, ಅಂತರಭಾರತಿ ತಾಂಡಾ 2. ಗಡಿಗೌಡಗಾಂವ ಗ್ರಾಮ ಪಂಚಾಯಿತಿ, ದೇವನಾಳ, ಮಾಚನಾಳ, 3. ಮುಚಳಂಬ ಗ್ರಾಮ ಪಂಚಾಯಿತಿ ಗಡಿರಾಯಪಳ್ಳಿ, ಮುಸ್ತಾಪೂರ, ಕಾದೆಪೂರ, ಲಿಂಬಾಪೂರ 4. ತೊಗಲೂರ ಗ್ರಾಮ ಪಂಚಾಯಿತಿ ಹಾಲಹಳ್ಳಿ, ಕಾದರಾಬಾದವಾಡಿ 5. ಮಿರಖಲ ಗ್ರಾಮ ಪಂಚಾಯಿತಿ, ಮಿರಖಲ ತಾಂಡ, ಅಂಬೆವಾಡಿ, ಆನಂದವಾಡಿ, ವಂಜರವಾಡಿ, ಕೋಟಮಾಳ, ಹಣಮಂತವಾಡಿ 6. ಬೇಲೂರ ಗ್ರಾಮ ಪಂಚಾಯಿತಿ ಗುತ್ತಿ
ಆ.	ಹುಲಸೂರು ತಾಲ್ಲೂಕಿನ ಕೆಲವು ಹಳ್ಳಿಗಳು ವಾಡಿಗಳು ಹಾಗೂ ತಾಂಡಾಗಳಲ್ಲಿ ಬಸ್ ಸೌಲಭ್ಯವಿಲ್ಲದೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಬಸ್ ಸೌಲಭ್ಯವನ್ನು ಕಲ್ಪಿಸಲಾಗುವುದು;	ಬೀದರ್ ಜಿಲ್ಲೆಯ ಹುಲಸೂರು ತಾಲ್ಲೂಕಿನ ವ್ಯಾಪ್ತಿಗೆ ಬರುವ ಒಟ್ಟು 22 ಗ್ರಾಮ ಪೈಕಿ ಗಳ ಪೈಕಿ 18 ಗ್ರಾಮಗಳಿಗೆ ಬಸ್ ಸೇವೆಯನ್ನು ಒದಗಿಸಲಾಗಿದೆ. ಇನ್ನುಳಿದ 4 ಗ್ರಾಮಗಳಿಗೆ ಹತ್ತಿರದ ಮುಖ್ಯ ರಸ್ತೆಯಿಂದ ಸಾರಿಗೆ ಸೌಲಭ್ಯ ಒದಗಿಸಲಾಗಿರುತ್ತದೆ. ವಿವರವನ್ನು 'ಅನುಬಂಧ'ದಲ್ಲಿ ನೀಡಲಾಗಿದೆ. ಕಾದರಾಬಾದ ಮತ್ತು ದೇವನಾಳ ಗ್ರಾಮಗಳಿಗೆ ಸೂಕ್ತ ರಸ್ತೆ ಸಂಪರ್ಕವಿರುದಿಲ್ಲ. ರಸ್ತೆ ಅಭಿವೃದ್ಧಿ ನಂತರ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು. ಮಾಚನಾಳ ಮತ್ತು ಕೋಟಮಾಳ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಕ್ರಮವಹಿಸಲಾಗಿದೆ.
ಇ.	ಈ ಹಳ್ಳಿಗಳಿಗೆ ಬಸ್ ಸೌಲಭ್ಯವನ್ನು ಕಲ್ಪಿಸದಿರಲು ಕಾರಣಗಳೇನು?	

ಸಂಖ್ಯೆ: ಟಿಡಿ 280 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

Power To Empower

ಅನುಬಂಧ–ಅ

ಕ್ರ.ಸಂ	ಗ್ರಾಮಗಳ ಹೆಸರು	ಬಸ್ ಸಂಚಾರದ ಸರತಿಗಳ ಸಮಯ
1	ಸೋಲದಾಬಕಾ	ಪ್ರತಿ ಹದಿನೈದು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
2	ಗುತ್ತಿ	ಪ್ರತಿ ಮೂವತ್ತು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
3	ಹಾಲಹಳ್ಳಿ	08.00, 17.00,
4	ಗಡಿಗೌಡಗಾಂವ	08.00, 17.00, 20.30
5	ಮಿರಕಲ್	7.45, 9.30, 11.30, 14.30, 15.00
6	ಬೇಲೂರ	ಪ್ರತಿ ಹದಿನೈದು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
7	ತೋಗಲೂರ	06.30, 7.00, 9.30, 17.00
8	ಮುಚಳಂಬ	ಪ್ರತಿ ಹದಿನೈದು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
9	ಗೋರ್ಟಾ	ಪ್ರತಿ ಹದಿನೈದು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
10	ವಾಂಜರವಾಡಿ	08.00, 16.00
11	ಗೊವರ್ಧನ ತಾಂಡಾ	08.00, 16.00
12	ಗಡಿರಾಯಪಳ್ಳಿ	08.00, 17.00
13	ಕಾದೇಪೂರ	08.00, 17.00, 20.30
14	ಅಂಬಾಪೂರ	08.00, 17.00, 20.30
15	ಮುಸ್ತಾಪೂರ	ಪ್ರತಿ ಹದಿನೈದು ನಿಮಿಷಗಳಿಗೆ ಒಂದರಂತೆ ಸರತಿಗಳಿವೆ.
16	ಹಣಮಂತವಾಡಿ	ಪ್ರತಿ ಮೂವತ್ತು ನಿಮೀಷಗಳಿಗೆ ಒಂದರಂತೆ ಸರತಿಗಳಿವೆ.
17	ಆನಂದವಾಡಿ	7.30,
18	ಅಂತರಬಾರತಿ ತಾಂಡಾ	8.00, 16.00

ಈ ಕೆಳಕಾಣಿಸಿದ 02 ಗ್ರಾಮಗಳಿಗೆ ತಕ್ಷಣ ಸಾರಿಗೆ ಸೌಲಭ್ಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

1	ಮಾಚನಾಳ	ಸದರಿ ಗ್ರಾಮದಿಂದ 1.5 ಕಿ.ಮೀ ಅಂತರದ ಮುಖ್ಯ ರಸ್ತೆಯಿಂದ 30 ನಿಮೀಷಗಳಿಗೆ ಒಂದರಂತೆ ಸರತಿಗಳಿವೆ. ವಿರಳ ಜನಸಂದಣಿ ಇರುವುದರಿಂದ ಬೇಡಿಕೆ ಇರುವುದಿಲ್ಲ. ತಕ್ಷಣ ಸಾರಿಗೆ ಸೌಲಭ್ಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.
2	ಕೋಟಮಳ	ಸದರಿ ಗ್ರಾಮದಿಂದ 1.5 ಕಿ.ಮೀ ಅಂತರದ ಮುಖ್ಯ ರಸ್ತೆಯಿಂದ 30 ನಿಮೀಷಗಳಿಗೆ ಒಂದರಂತೆ ಸರತಿಗಳಿವೆ. ವಿರಳ ಜನಸಂದಣಿ ಇರುವುದರಿಂದ ಬೇಡಿಕೆ ಇರುವುದಿಲ್ಲ. ತಕ್ಷಣ ಸಾರಿಗೆ ಸೌಲಭ್ಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಕೆಳಕಾಣಿಸಿದ 02 ಗ್ರಾಮಗಳಿಗೆ ರಸ್ತೆ ಸಮರ್ಪಕವಾಗಿರುವುದಿಲದ ಕಾರಣ ಸಾರಿಗೆ ಸೌಲಭ್ಯ ಒದಗಿಸಿರುವುದಿಲ್ಲ.

1	ಕಾದರಾಬಾದ	ಸದರಿ ಗ್ರಾಮದಿಂದ 2 ಕಿ.ಮೀ ಅಂತರದ ಮುಖ್ಯ ರಸ್ತೆಯಿಂದ 15 ನಿಮೀಷಗಳಿಗೆ ಒಂದರಂತೆ ಸರತಿಗಳಿವೆ. ಮುಖ್ಯ ರಸ್ತೆಯಿಂದ 02 ಕಿ.ಮೀ ಕಚ್ಚಾ ರಸ್ತೆ ಇರುತ್ತದೆ. ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯವಾಗಿರುವುದಿಲ್ಲ.
2	ದೇವನಾಳ	ಸದರಿ ಗ್ರಾಮದಿಂದ 2 ಕಿ.ಮೀ ಅಂತರದ ಮುಖ್ಯ ರಸ್ತೆಯಿಂದ 15 ನಿಮೀಷಗಳಿಗೆ ಒಂದರಂತೆ ಸರತಿಗಳಿವೆ. ಮುಖ್ಯ ರಸ್ತೆಯಿಂದ 02 ಕಿ.ಮೀ ಕಚ್ಚಾ ರಸ್ತೆ ಇರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು